International Journal of Kannada Research
www.kannadajournal.com

ISSN: 2454–5813
IJKR 2017; 3(4): 166-167
© 2017 IJKR
www.kannadajournal.com
Received: 28-08-2017
Accepted: 29-09-2017

**ಪ್ರಭಾಕರ ಎಸ್ ಕುಂಬಾರ**
ಕನ್ನಡ ಸಂಶೋಧನಾ ವಿದ್ಯಾರ್ಥಿ
ನೃಪತುಂಗ ಸಂಶೋಧನಾ
ವಿದ್ಯಾರ್ಥಿಗಳ ವಸತಿ ನಿಲಯ

**Correspondence**
**ಪ್ರಭಾಕರ ಎಸ್ ಕುಂಬಾರ**
ಕನ್ನಡ ಸಂಶೋಧನಾ ವಿದ್ಯಾರ್ಥಿ
ನೃಪತುಂಗ ಸಂಶೋಧನಾ
ವಿದ್ಯಾರ್ಥಿಗಳ ವಸತಿ ನಿಲಯ

# ಲೌಕಿಕ ಮತ್ತು ಜಿನಾಗಮ

**ಪ್ರಭಾಕರ ಎಸ್ ಕುಂಬಾರ**

ಧರ್ಮವೊಂದು ವ್ಯಕ್ತಿಯ ಬದುಕಿನಲ್ಲಿ ನಿರ್ವಹಿಸುವ ಪಾತ್ರ ಬಹು ದೊಡ್ಡದು. ಪ್ರತಿ ಧರ್ಮದ ಸಾರ ಕೊನೆಗೆ ಮೋಕ್ಷ ಮತ್ತು ಮಾನವೀಯ ಮೌಲ್ಯಗಳನ್ನೇ ಪ್ರತಿಪಾದಿಸುವುದು. ಪ್ರಖ್ಯಾತಿ ಹೊಂದಿದ ಪ್ರಮುಖ ಧರ್ಮಗಳಲ್ಲಿ ಜೈನಧರ್ಮವೂ ಒಂದು. ಅಹಿಂಸೆಯನ್ನು ಪ್ರತಿಪಾದಿಸಿದ ಎರಡು ಧರ್ಮಗಳಲ್ಲಿ ಒಂದು ಬೌದ್ಧಧರ್ಮ ಇನ್ನೊಂದು ಜೈನ ಧರ್ಮ. ಈ ಎರಡು ಧರ್ಮಗಳು ತಮ್ಮ ಹುಟ್ಟಿನಿಂದ ಮಾನವ ಜಗತ್ತಿನಲ್ಲಿ ಹಿಂಸೆಯನ್ನು ವಿರೋಧಿಸುವ ತತ್ವವನ್ನು ಎತ್ತಿಹಿಡಿದಿವೆ. ಜೈನಧರ್ಮದಲ್ಲಿರುವ ಆಚಾರಗಳಿಗೆ ಒಂದು ವಿಶೇಷಸ್ಥಾನಮಾನವಿದೆ. ಧರ್ಮವೊಂದರ ತಿರುಳನ್ನು ಅಕ್ಷರಲೋಕ ಗ್ರಹಿಸುವ ರೀತಿ ಸಾಮಾನ್ಯರಿಗಿಂತ ಭಿನ್ನವಾಗಿರುತ್ತದೆ. ಜೈನ ಧರ್ಮದ ಪಾರಮ್ಯ ಕನ್ನಡ ಚರಿತ್ರೆಯ ದೃಷ್ಟಿಯಿಂದ ಮತ್ತು ಸಾಹಿತ್ಯದ ದೃಷ್ಟಿಯಿಂದ ಬಹಳ ವಿಶಿಷ್ಟವಾದುದ್ದಾಗಿದೆ.

ದಕ್ಷಿಣ ಭಾರತದ ಜೈನಧರ್ಮದ ಇತಿಹಾಸವೆಂದರೆ ಕರ್ನಾಟಕದ ಜೈನಧರ್ಮದ ಇತಿಹಾಸವಾಗಿದೆ. ಪ್ರಾಚೀನ ಕರ್ನಾಟಕದಲ್ಲಿ ಜೈನಧರ್ಮ ಒಂದು ಪ್ರಬಲವಾದ ಧರ್ಮವಾಗಿತ್ತು. ಆ ಧರ್ಮದ ತಿರುಳನ್ನು ಹೀಗೆ ಸಂಗ್ರಹಿಸಬಹುದು: ಆತ್ಮವು ತನ್ನ ಸಹಜ ಶುದ್ಧತೆಯನ್ನು ಮರಳಿ ಪಡೆದುಕೊಂಡು ಕೇವಲ ಜ್ಞಾನವನ್ನು ಪಡೆಯುವುದೇ ಜೀವನದ ಗುರಿ. ಅದೊಂದು ಅಲೌಕಿಕ ಸ್ಥಿತಿ. ಆತ್ಮವು ಆಗ ಎಲ್ಲಾ ಪೂರ್ಣತೆಗಳನ್ನೂ ಹೊಂದಿರುತ್ತದೆ. ಅನಂತಜ್ಞಾನ ಮಾತ್ರವಲ್ಲ, ಅನಂತ ಶಾಂತಿ, ಅನಂತ ಶಕ್ತಿಗಳನ್ನೂ ಹೊಂದಿರುತ್ತದೆ. ಉಪನಿಷತ್ತಿನ ಬೋಧನೆಯ ಹಾಗೇಯೇ ಇಲ್ಲಿಯೂ ಮೋಕ್ಷವೆಂದರೆ ಪುಣ್ಯ ಪಾಪಗಳೆರಡನ್ನೂ ಮೀರಿ ನಿಲ್ಲುವುದು. ಈ ಸ್ಥಿತಿಯನ್ನು ಪಡೆಯಲು ತ್ರಿಮುಖವಾದ ಸಾಧನೆ ಅವಶ್ಯಕ. ಜೈನ ತತ್ವದಲ್ಲಿ ನಂಬಿಕೆ (ಸಮ್ಯಕ್ ದರ್ಶನ); ಇದಕ್ಕೆ ಸಮ್ಯಗ್ ಜ್ಞಾನ, ಸಮ್ಯಗ್ ಚಾರಿತ್ರ್ಯಗಳು ಪೋಷಕಗಳಾಗಿ ಬಂದಾಗ ಮೋಕ್ಷ ಅಥವಾ ನಿರ್ವಾಣವು ಲಭಿಸುತ್ತದೆ. ಈ ಮೂರನ್ನು 'ತ್ರಿರತ್ನ'ಗಳೆಂದು ಕರೆಯುತ್ತಾರೆ.

ಭರತಖಂಡದ ಇತರ ತತ್ವಗಳಲ್ಲಿರುವಂತೆಯೇ ಇಲ್ಲಿಯೂ ಯೋಗಕ್ಕೆ ಪ್ರಮುಖ ಸ್ಥಾನವುಂಟು. ಈ ಸಾಧನೆಯಿಂದ ಮೋಕ್ಷವು ಹೇಗೇ ಲಭಿಸುತ್ತದೆ ಎಂಬುದನ್ನು ತಿಳಿಯಬೇಕಾದರೆ, ಜೀವ ಮತ್ತು ಅಜೀವಗಳಿಗೆ ಸಂಬಂಧ ಕಲ್ಪನೆ ಮಾಡುವುದೇ ಕರ್ಮ ಎಂಬುದನ್ನು ಜ್ಞಾಪಿಸಿಕೊಳ್ಳಬೇಕು. (ಕರ್ಮವು ಅತ್ಯಂತ ಸೂಕ್ಷ್ಮವಾದ ಜಡವಸ್ತು). ಆತ್ಮವು ತನ್ನ ಲೌಕಿಕ ಸ್ಥಿತಿಯಲ್ಲಿ ಇಂತಹ ಜಡವಸ್ತುವಿನಿಂದ ವ್ಯಾಪ್ತವಾಗಿರುತ್ತದೆ. ಅಜೀವದ ಪ್ರಭೇದವಾದ ಈ ಕರ್ಮದಿಂದ ಬಿಡುಗಡೆಯನ್ನು ಹೊಂದುವುದೇ ಅದರ ಪ್ರಧಾನ ಗುರಿ. ಮೋಕ್ಷವೆಂಬುವುದು ಒಂದು ಪೂರ್ಣ ಸ್ಥಿತಿ ಅಂದರೆ ಜೈನಧರ್ಮವು ಒಬ್ಬ ಪರಮಾತ್ಮನ ಅಸ್ಥಿತ್ವವನ್ನನು ಒಪ್ಪದಿದ್ದರೂ, ಪರಿಪೂರ್ಣತೆಯ ರೂಪದಲ್ಲಿ ದಿವ್ಯತ್ವ ಭಾವನೆಯನ್ನು ಉಳಿಸಿಕೊಂಡಿದೆ. ಕರ್ಮ ಪ್ರವಾಹ (ಆಸ್ರವ), ಅದರಿಂದ ಬಂಧನ (ಬಂಧ), ಅದನ್ನು ತಡೆಯುವುದು (ಸಂವರ), ಅದು ಬಿದ್ದುಹೋಗುವದು (ನಿರ್ಜರ) ಮತ್ತು ಬಿಡುಗಡೆ (ಮೋಕ್ಷ) ಇವುಗಳ ಜೊತೆಯಲ್ಲಿ ಜೀವ ಮತ್ತು ಅಜೀವಗಳನ್ನು ಸೇರಿಸಿ ಸಪ್ತತತ್ವಗಳೆಂದು ಜೈನಧರ್ಮದಲ್ಲಿ ಕರೆಯಲಾಗಿದೆ.

ಜೈನಧರ್ಮವು ಬೌದ್ಧಧರ್ಮದ ಒಂದು ಪ್ರಭೇದವೆಂದೂ, ಅದಕ್ಕೆ ಸ್ವತಂತ್ರ ಅಭ್ಯಾಸದ ಅಗತ್ಯವಿಲ್ಲವೆಂದೂ ಹೋದ ಶತಮಾನದ ಆರಂಭದಲ್ಲಿ ಕೆಲವರು ಭಾವಿಸಿದ್ದರು. ಅನಂತರ ನಡೆದ ಸಂಶೋಧನೆಗಳಿಂದ ಅದೇ ಒಂದು ಪ್ರತ್ಯೇಕವಾದ ಧರ್ಮವೆಂದೂ, ಬೌದ್ಧಧರ್ಮಕ್ಕಿಂತ ಸ್ವಲ್ಪ ಪ್ರಾಚೀನವೆಂದೂ ಸ್ಥಿರಪಟ್ಟಿದೆ.

**ಲೌಕಿಕ ಪರಿಕಲ್ಪನೆ:** ಪಂಪ ಆದಿಪುರಣವನ್ನು ರಚಿಸಿದ ಮೇಲೆ ಅವನಿಗೆ ಜಿನಮುನಿಗಳು ಮತ್ತು ಪಂಡಿತರುಗಳಿಂದ ಸಾಕಷ್ಟು ಪ್ರೋತ್ಸಾಹ ಪ್ರಚಾರಗಳು ಸಿಕ್ಕಿರಬೇಕು.

ಇಂಥ ಒಬ್ಬ ಸಮರ್ಥ ಕವಿಯ ಸುದ್ದಿ ಅರಸನ ಕಿವಿಗೂ ಮುಟ್ಟಿ ಅವನು ಪಂಪನನ್ನು " ಸಂಪ್ರೀತಿಯೇ ಬಟಿಯಟ್ಟಿ ಪಿಜೆದನಿತ್ತು ನಿಜಾಭಿಖ್ಯಾತಿಯನಿಟ್ಟಿಯೊಳ್ ನಿಜೆಸಲ್" ಕೇಳಿಕೊಂಡಿರಬಹುದು. ಅರಸನಿಗೆ ತನ್ನ ಕಥೆಯನ್ನು ಜಗತ್ತಿನಲ್ಲಿ ನಿಲ್ಲಿಸುವಂತೆ ಮಾಡಲು ಸಾಕಷ್ಟು ಬಲವಾದ ಕಾರಣಗಳಿರಬೇಕು. ರಾಜರು ತಮ್ಮನ್ನೇ ಕಥಾನಾಯಕನನ್ನಾಗಿ ಮಾಡಿಸಿ ಬರೆಸಿದ್ದ ಕಾವ್ಯಗಳನ್ನು ಗಮನಿಸಬಹುದು. ಅಲ್ಲದೇ ಕವಿರಾಜಮಾರ್ಗಕಾರನಿಗೂ ಹಿಂದಿದ್ದ ಚಂದ್ರಪ್ರಭ ಪುರಾಣವನ್ನು ಬರೆದಿದ್ದನೆನ್ನಾಲಾದ ಶ್ರೀವಿಜಯ ನಂತರದ ಅಸಗ, ಗುಣವರ್ಮ ಮೊದಲಾದವರು ಒಂದು ಜೈನಕಾವ್ಯ ಮತ್ತೊಂದು ಅರಸನೇ ಕಥಾನಾಯಕನಾಗಿರುವ ವೈದಿಕಕಾವ್ಯ ಹೀಗೆ ಬರೆದು ಒಂದು ಪರಂಪರೆಯನ್ನೇ ಸೃಷ್ಟಿಸಿಕೊಟ್ಟರು. ಅದನ್ನೇ ಮಾರ್ಗಕಾರ ಲೌಕಿಕ, ಸಾಮಯಿಕ ಎಂದು ವಿಭಾಗ ಮಾಡಿ ಹೇಳಿದ್ದ. ತನ್ನ ಎರಡನೇ ಕಾವ್ಯ ಮುಗಿಯುವವರೆಗೆ ಈ ವಿಚಾರದಲ್ಲಿ ಮೌನವಾಗಿದ್ದ ಪಂಪ ಕೊನೆಗೆ 'ಬೆಳಗುವಿನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ' ಎಂದು ಎರಡನ್ನೂ ಬೇರೆ ಬೇರೆಯಾಗಿ ಹೇಳುತ್ತಾನೆ.

ಪಂಪ ಹೇಳುವ ಲೌಕಿಕ ಕಾವ್ಯಕ್ಕೆ ಮೇಲುನೋಟಕ್ಕೆ ಸಮಕಾಲೀನ ಎನ್ನುವ ಅರ್ಥವಿದೆಯಾದರೂ ಪಂಪ ಹೇಳಿದ ಕಥೆ ಮಹಾಭರತವಾದ್ದರಿಂದ ಅದನ್ನು ಯಾರೂ ಲೌಕಿಕ ಕಾವ್ಯ ಎನ್ನಲಾಗದು. ಪಂಚಮವೇದವೆಂದು ಖ್ಯಾತವಾದ ಈ ವೈದಿಕ ಮಹಾಕಾವ್ಯದ ವಸ್ತುವನ್ನು ಪಂಪ ತಾನು ಜೈನನಾದುದರಿಂದ ತನ್ನ ಧರ್ಮಕ್ಕೆ ಹೊರತಾದುದರಿಂದ ಅದರಲ್ಲೂ ಸಮಕಾಲೀನ ವಿಚಾರವನ್ನು ತುಂಬಿಕೊಂಡಿದ್ದರಿಂದ ಲೌಕಿಕ ಎಂದು ಕರೆದು ಜೈನ ಸಂಪ್ರದಾಯವಾದಿಗಳನ್ನು ಮೆಚ್ಚಿಸಬೇಕಾಯಿತು.

ಈ ಲೌಕಿಕ ಎನ್ನುವುದರ ಅರ್ಥವಾದರೂ ಏನು? ಕವಿರಾಜಮಾರ್ಗಕಾರ ಲೌಕಿಕ ಸಾಮಯಿಕ ಕಾವ್ಯ ಭೇದವನ್ನು ಹೇಳೀದರೂ ವಿವರ ಹೇಳುವುದಿಲ್ಲ. ಕನ್ನಡ ಕಾವ್ಯವನ್ನು ಪ್ರಾರಂಭ ಮಾಡಿದವರು ಜೈನಕವಿಗಳಾದುದರಿಂದ ಅವರು ತಮ್ಮ ಆಶ್ರಿತರಾದ ಜೈನೇತರ ರಾಜರನ್ನು ಕುರಿತು ಕತೆಯೊಳಗೆ ಅದರಲ್ಲೂ ವೈದಿಕ ಪರಂಪರೆಯ ಕತೆಯೊಳಗೆ ಸಮೀಕರಿಸಿ ಸಮಕಾಲೀನ ವಿಚಾರಗಳನ್ನು ಅವಕಾಶ ಸಿಕ್ಕಿದ ಕಡೆ ಸೇರಿಸಿ ಹೇಳಿದ ಕಾವ್ಯಗಳನ್ನು ಜೈನೇತರ ಎಂದು ಬೇರೆ ಮಾಡಿ ಲೌಕಿಕ ಎಂದು ಕರೆದಿರಬೇಕು. (ಸಿ.ವೀರಣ್ಣ) ಪಂಚಮವೇದವೆಂದು ಕರೆದ ಮಹಾಭಾರತವನ್ನು ವೈದಿಕರು ಲೌಕಿಕ ಎಂದು ಕರೆಯಲು ಒಪ್ಪುತ್ತಿರಲಿಲ್ಲ ಮಾತ್ರವಲ್ಲ ಅದರಲ್ಲಿ ರಾಜನೊಬ್ಬನನ್ನು ಸಮೀಕರಿಸಿ ಹೇಳಿದ್ದು ಅವರಿಗೆ ಇಷ್ಟವಾದ ವಿಚಾರವೂ ಆಗಿರಲಿಲ್ಲ. ಇತ್ತ ಜೈನರಿಗೂ ಪಂಪನ ಆದಿಪುರಾಣ, ಪೊನ್ನನ ಶಾಂತಿಪುರಾಣ, ರನ್ನನ ಅಜಿತಪುರಾಣ ಇಷ್ಟವಾದ ಹಾಗೆ ವಿಕ್ರಮಾರ್ಜುನ ವಿಜಯ, ಭುವನೈಕ ರಾಮಾಭ್ಯುದಯ, ಗದಾಯುದ್ಧಗಳು ಇಷ್ಟವಾಗಿಲ್ಲದಿರಬಹುದು.

**ಆಗಮಿಕ ಪರಿಲ್ಪನೆ:** ವೇದಗಳ ಅನಂತರದಲ್ಲಿ ಆಗಮಗಳು ಬಂದವು. 1.ಶೈವಾಗಮ 2. ವೈಷ್ಣವಾಗಮ 3. ಶಾಕ್ತಾಗಮ 4. ಜೈನಾಗಮ ಇವು ಮುಖ್ಯವಾದವು. ಜಿನಾಗಮಕ್ಕಿಂತ ಮೊದಲೇ ಬೌದ್ಧಾಗಮವೂ ಬಂದಿರಬೇಕೆಂಬ ಊಹೆಯಿದೆ. ಕನ್ನಡ ಸಾಹಿತ್ಯದ ದೃಷ್ಟಿಯಿಂದ ಪರಿಶೀಲಿಸಿದರೆ ಆಗಮಿಕ ಕಾವ್ಯಗಳನ್ನು ಮೊದಲು ಬರೆದವರು ಜೈನ ಕವಿಗಳು. ಆದಿ ಕವಿ ಪಂಪ ತನ್ನ ಆದಿಪುರಾಣವನ್ನು ಆಗಮಿಕ ಕಾವ್ಯ ಎಂದು ಕರೆದಿದ್ದಾನೆ. ಆಗಮಿಕ ಕಾವ್ಯಗಳು ಒಳಗೊಳ್ಳುವ ಸಂಗತಿಗಳನ್ನು ಹೀಗೆ ಕ್ರೋಢಿಕರಿಸಬಹುದು. ಜಗತ್ತು ಸೃಷ್ಟಿಕರ್ತ ಆತ್ಮ ಇವುಗಳ ಚರ್ಚೆ ಅಂತ್ಯದಲ್ಲಿ ಮೋಕ್ಷ ಅಥವಾ ಕೈವಲ್ಯ ಪ್ರಾಪ್ತಿಗೆ ಸಾಧಕನು ಅನುಸರಿಸಬೇಕಾದ ವಿಧಿ ವಿಧಾನಗಳು, ಕರ್ಮಾಚರಣೆಗಳನ್ನು ತಿಳಿಸುವಂತಹವು. ಆಗಮಿಕ ಕಾವ್ಯಗಳು ಮುಖ್ಯವಾಗಿ ಮತದ ವಿಚಾರಗಳೇ. ಆದ್ದರಿಂದ ಬೇರೆ ಬೇರೆ ರೀತಿ ನೀತಿಗಳನ್ನು ಬೇರ ಬೇರೆ ಮತಗಳವರು ತಮ್ಮ ತಮ್ಮ ಆಗಮಿಕ ಕಾವ್ಯಗಳಲ್ಲಿ ಕಂಡರಿಸಿದ್ದಾರೆ. ಕನ್ನಡ ಜೈನ ಕಾವ್ಯಗಳ ಮೇಲೆ ಸುಮಂತಭದ್ರ, ಕವಿ ಪರಮೇಷ್ಟಿ, ಪೂಜ್ಯಪಾದರ ಪ್ರಭಾವವಿದೆಯೆಂಬುದು ವಿದ್ವಾಂಸರ ಅಭಿಮತ. ಪಂಪ, ಪೊನ್ನ, ರನ್ನ, ನಾಗಚಂದ್ರ, ಜನ್ನ ಮತ್ತು ಶಿವಕೋಟ್ಯಾಚಾರ್ಯ ಮುಂತಾದವರು ಜೈನ ಧರ್ಮ ಪ್ರತಿಪಾದನೆಯನ್ನು ತಮ್ಮ ಕೃತಿಗಳ ಮುಖಾಂತರ ಮಾಡಿದ್ದಾರೆ. 'ಆದಿಪುರಾಣ ಜಿನಕಥೆ ನಿಮಿತ್ತವಾಗಿ ಮನುಷ್ಯ ಸ್ವಸಾಧನೆಯಿಂದ ಮುಟ್ಟಬೇಕಾದ ಆದ್ಯಾತ್ಮಿಕ ಸಿದ್ಧಿಯನ್ನು ತೋರಿಸಿದರೆ ವಿಕ್ರಮಾರ್ಜುನ ವಿಜಯ ಭಾರತಕಥೆ ನಿಮಿತ್ತವಾಗಿ ಮನುಷ್ಯಲೋಕ ವ್ಯವಹಾರದಲ್ಲಿ ಸಾಧಿಸಬೇಕಾದ ಸಮತೆ ವಿವೇಕಗಳನ್ನು ಬೋಧಿಸುತ್ತದೆ'ಎಂದು ಟಿ.ವಿ. ವೆಂಕಟಾಚಲಾಶಾಸ್ತ್ರಿಯವರು ಹೇಳಿದ್ದಾರೆ.